## ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಬಿ.ಕೆ. ಹರಿಪ್ರಸಾದ್ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ

### ಸೂಚನೆ

ಹಲವು ವರ್ಷಗಳ ಹೋರಾಟದ ಫಲವಾಗಿ ಬಾಗಲಕೋಟೆ ಜಿಲ್ಲೆಗೆ ನಾಲ್ಕು ಹೊಸ ತಾಲ್ಲೂಕುಗಳು ಘೋಷಣೆಯಾಗಿದ್ದರೂ ಹೆಸರಿಗಷ್ಟೇ ಮೂರು ಮತ್ತೊಂದು ತಾಲ್ಲೂಕು ಎಂಬಂತಾಗಿರುವ ಬಗ್ಗೆ ಉದಯವಾಣಿ ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಈ ಪೈಕಿ ನೂತನ ತಾಲ್ಲೂಕು ಕೇಂದ್ರವಾಗಿರುವ ರಬಕವಿ-ಬನಹಟ್ಟಿ ಮೂಲಭೂತ ಸೌಕರ್ಯಗಳನ್ನು ಎದರಿಸುತ್ತದೆ. ತಾಲ್ಲೂಕು ಘೋಷಣೆಯಾಗಿ 9 ವರ್ಷಗಳು ಕಳೆದರೂ ತಾಲ್ಲೂಕು ಪಂಚಾಯತ್ ಕಚೇರಿ ಹೊರತುಪಡಿಸಿ ಯಾವುದೇ ಇಲಾಖೆ ಕಛೇರಿಗಳು ಇಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. ಕಂದಾಯ, ಆರೋಗ್ಯ, ಶಿಕ್ಷಣ, ಕೃಷಿ, ಪಶುಸಂಗೋಪನೆ, ಶಿಶು ಅಭಿವೃದ್ಧಿ, ಸಮಾಜ ಕಲ್ಯಾಣ, ಲೋಕೋಪಯೋಗಿ ಇಲಾಖೆ, ತೋಟಗಾರಿಕೆ ಹೀಗೆ ಯಾವುದೇ ಕಚೇರಿಗಳು ಅಲ್ಲಿ ಇರುವುದಿಲ್ಲ ಅದರಂತೆ ಗುಳೇದಗುಡ್ಡ ಪಟ್ಟಣ ತಾಲ್ಲೂಕು ಕೇಂದ್ರವಾಗಿ 9 ವರ್ಷ ಕಳೆದಿದ್ದರೂ ತಹಶೀಲ್ದಾರ್ ಕಛೇರಿ ಹೊರತುಪಡಿಸಿ ಎಲ್ಲದಕ್ಕೂ ಹುನುಗುಂದವನ್ನು ಅಶ್ರಯಿಸುವಂತಾಗಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಎರಡೂ ತಾಲ್ಲೂಕುಗಳನ್ನು ನೋಡಿಕೊಳ್ಳುತ್ತಿದ್ದಾರೆ ಇನ್ನೂ ತೆರೆದಾಳ ತಾಲ್ಲೂಕು ಸ್ವಾತಂತ್ರ್ಯಪೂರ್ವದಲ್ಲಿ ತಾಲ್ಲೂಕು ಕೇಂದ್ರವಾಗಿತ್ತು ಆ ಬಳಿಕ ತಾಲ್ಲೂಕು ಸ್ಥಾನಮಾನವನ್ನು ಕಳೆದುಕೊಂಡಿತ್ತು. ಆದರೆ ಹಲವಾರು ವರ್ಷಗಳ ಹೋರಾಟಕ್ಕೆ ಮಣಿದು ಹೊಸ ತಾಲ್ಲೂಕು ಎಂದು ಅಧಿಸೂಚನೆ ಹೊರಡಿಸಿದ್ದರು ಇಂದಿಗೂ ಪೂರ್ಣಪ್ರಮಾಣದಲ್ಲಿ ಜಾರಿಗೆ ಬಂದಿರುವುದಿಲ್ಲ.

ಈ ಎಲ್ಲ ತಾಲ್ಲೂಕುಗಳಿಗೆ ಸಿಗಬೇಕಾದ ಸ್ಥಾನಮಾನಗಳು ಇದುವರೆಗೂ ದೊರೆಯದಿರುವುದು ಅತ್ಯಂತ ನೋವಿನ ಸಂಗತಿಯಾಗಿರುತ್ತದೆ. ಸರ್ಕಾರಕ್ಕೆ ಸಂಕಷ್ಟಗಳು ಹೊಸದಲ್ಲ. ಆದರೆ ರಾಜ್ಯದಲ್ಲಿ ಅಧಿಕೃತವಾಗಿ ಹೊಸ ತಾಲ್ಲೂಕುಗಳು ರಚನೆಯಾದಮೇಲೆ ಪೂರ್ಣ ಪ್ರಮಾಣದ ಕಛೇರಿ ಕಾರ್ಯರಂಭಕ್ಕೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಇಚ್ಚಾ ಶಕ್ತಿಯ ಕೊರತೆ ಎದ್ದು ಕಣುತ್ತದೆ.

ಆದಕಾರಣ, ಸರ್ಕಾರ ಈ ನಾಲ್ಕೂ ತಾಲ್ಲೂಕುಗಳ ಅಭಿವೃದ್ಧಿಗೆ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

### ಹೇಳಿಕೆ

2017-18ನೇ ಸಾಲಿನಿಂದ ಇದುವರೆಗೆ ಬಾಗಲಕೋಟೆ ಜಿಲ್ಲೆಯಲ್ಲಿ 1) ಗುಳೇದಗುಡ್ಡ 2) ರಬಕವಿ-ಬನಹಟ್ಟಿ 3) ತೇರದಾಳ ಮತ್ತು 4) ಇಳಕಲ್ ಎಂಬ ಒಟ್ಟು 04 ನೂತನ ತಾಲ್ಲೂಕುಗಳನ್ನು ಸೃಜಿಸಲಾಗಿದೆ. ಸದರಿ ನೂತನ ತಾಲ್ಲೂಕುಗಳಿಗೂ ಜನಸಂಖ್ಯೆ ಮತ್ತು ಗ್ರಾಮಗಳ ಸಂಖ್ಯೆಗಳ ಆಧಾರದ ಮೇಲೆ ತಹಸೀಲ್ದಾರ್ ಸೇರಿದಂತೆ ಅಗತ್ಯ ಸಂಖ್ಯೆಯ ಸಿಬ್ಬಂದಿಗಳನ್ನು ಮಂಜೂರು ಮಾಡಿ ತಹಸೀಲ್ದಾರ್ ಕಛೇರಿಯನ್ನು ಪ್ರಾರಂಭಿಸಲಾಗಿದೆ. ಸದರಿ ತಾಲ್ಲೂಕುಗಳಲ್ಲಿ ಈ ಕೆಳಕಂಡ ತಾಲ್ಲೂಕು ಮಟ್ಟದ ಕಛೇರಿಗಳು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿವೆ.

| ಕ್ರ.ಸಂ. | ತಾಲ್ಲೂಕು | ಕಾರ್ಯ ನಿರ್ವಹಿಸುತ್ತಿರುವ ಕಛೇರಿಗಳ ವಿವರ |
|---|---|---|
| 1. | ಗುಳೇದಗುಡ್ಡ | 1. ತಹಸೀಲ್ದಾರ್ ಕಚೇರಿ<br>2. ತಾಲ್ಲೂಕು ಪಂಚಾಯತಿ |

| | | |
|---|---|---|
| 2. | ಇಳಕಲ್ | 1. ತಹಸೀಲ್ದಾರ್ ಕಚೇರಿ<br>2. ತಾಲ್ಲೂಕು ಪಂಚಾಯತಿ |
| 3. | ರಬಕವಿ- ಬನಹಟ್ಟಿ | 1. ತಹಸೀಲ್ದಾರ್ ಕಚೇರಿ<br>2. ತಾಲ್ಲೂಕು ಪಂಚಾಯತಿ<br>3. ಪಶು ಸಂಗೋಪನೆ ಆಸ್ಪತ್ರೆ<br>4. ಉಪಖಜಾನೆ<br>5. ನಗರ ಭೂಮಾಪನ ಕಛೇರಿ<br>6. ಅಗ್ನಿ ಶಾಮಕ ದಳ<br>7. ಸಮುದಾಯ ಆರೋಗ್ಯಾಧಿಕಾರಿಗಳ ಕಛೇರಿ<br>8. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಹೆಸ್ಕಾಂ<br>9. ನಗರಾಭಿವೃದ್ಧಿ ಪ್ರಾಧಿಕಾರ<br>10. ನಗರಸಭೆ<br>11. ಪುರಸಭೆ<br>12. ಪೊಲೀಸ್ ಇಲಾಖೆ |
| 13. | ತೇರದಾಳ | 1. ತಹಸೀಲ್ದಾರ್ ಕಚೇರಿ<br>2. ಉಪನೋಂದಣಾಧಿಕಾರಿಗಳ ಕಛೇರಿ<br>3. ಪುರಸಭೆ<br>4. ರೈತ ಸಂಪರ್ಕ ಕೇಂದ್ರ<br>5. ನಾಡ ಕಛೇರಿ ತೇರದಾಳ<br>6. ಪಶು ಆಸ್ಪತ್ರೆ<br>7. ಪ್ರಾಥಮಿಕ ಆರೋಗ್ಯ ಕೇಂದ್ರ<br>8. ಆರಕ್ಷಕ ಉಪನಿರೀಕ್ಷಕ ಠಾಣೆ |

ಮೇಲ್ಕಂಡ ನೂತನ ತಾಲ್ಲೂಕುಗಳಿಗೆ ಇನ್ನುಳಿದ ಇಲಾಖೆಗಳ ತಾಲ್ಲೂಕು ಮಟ್ಟದ ಕಚೇರಿಗಳನ್ನು ಪ್ರಾರಂಭಿಸಲು ಅನುವಾಗುವಂತೆ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹುದ್ದೆಗಳನ್ನು ಸೃಜಿಸಿ ಹಂತ-ಹಂತವಾಗಿ ಕಚೇರಿಗಳನ್ನು ಪ್ರಾರಂಭಿಸಲು ಎಲ್ಲಾ ಇಲಾಖೆಗಳ ಅಪರ ಮುಖ್ಯ/ಪ್ರಧಾನ ಕಾರ್ಯದರ್ಶಿಗಳಿಗೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಮೂಲಕ ಸೂಕ್ತ ನಿರ್ದೇಶನ ನೀಡಲಾಗಿದೆ.

2017-18 ನೇ ಸಾಲಿನಿಂದ ಇದುವರೆಗೂ ಗುಳೇದಗುಡ್ಡ, ರಬಕವಿ-ಬನಹಟ್ಟಿ ಹಾಗೂ ಇಳಕಲ್ ತಾಲ್ಲೂಕುಗಳಿಗೆ ಕ್ರಮವಾಗಿ 49.50 ಲಕ್ಷಗಳನ್ನು ಮತ್ತು ತೇರದಾಳ ತಾಲ್ಲೂಕಿಗೆ 8.00 ಲಕ್ಷಗಳನ್ನು ತಾಲ್ಲೂಕಿನ ಕಾರ್ಯಾರಂಭ ಮತ್ತು ಆಡಳಿತಾತ್ಮಕ ಪ್ರಕಿಯೆ ಪ್ರಾರಂಭಿಸಲು ಹಾಗೂ ಇತರೆ ಖರ್ಚು ವೆಚ್ಚಗಳನ್ನು ಭರಿಸಲು ಕಂದಾಯ ಇಲಾಖೆಯಿಂದ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಅಲ್ಲದೇ ಪ್ರತೀ ವರ್ಷದ ಆಯವ್ಯಯದಲ್ಲಿ ಒದಗಿಸುವ ಅನುದಾನವನ್ನು ಆಧರಿಸಿ ತಾಲ್ಲೂಕು ಕೇಂದ್ರಗಳಲ್ಲಿ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಕಲ್ಪಿಸಲು ಹಂತ-ಹಂತವಾಗಿ ಕ್ರಮವಹಿಸಲಾಗುವುದು.

ಮುಂದುವರೆದು, ಹೊಸದಾಗಿ ರಚನೆಯಾದ ತಾಲ್ಲೂಕುಗಳಲ್ಲಿ ಪ್ರಜಾ ಸೌಧ, ತಾಲ್ಲೂಕು ಆಡಳಿತ ಕೇಂದ್ರ ಕಟ್ಟಡಗಳನ್ನು 1735 ಚ.ಮೀ ವಿಸ್ತೀರ್ಣದಲ್ಲಿ ರೂ.8.60 ಕೋಟಿಗಳ ಅಂದಾಜು ಮೊತ್ತದಲ್ಲಿ Type-A ಮಾದರಿ (Design) ಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಬಾಗಲಕೋಟೆ ಜಿಲ್ಲೆಯ ಹೊಸದಾಗಿ ರಚನೆಯಾದ ಇಲಕಲ್ಲ ತಾಲ್ಲೂಕಿನಲ್ಲಿ ಹೊಸದಾಗಿ ಪ್ರಜಾಸೌಧ ಇಲಕಲ್ಲ ತಾಲ್ಲೂಕು ಆಡಳಿತ ಕೇಂದ್ರ ಕಟ್ಟಡ ನಿರ್ಮಿಸಲು ಸರ್ಕಾರದ ಆದೇಶ ಸಂಖ್ಯೆ:ಕಂಇ 93 ಡಬ್ಲೂಬಿಆರ್ 2024 ದಿನಾಂಕ:16.11.2024 ರಂತೆ ರೂ.8.60 ಕೋಟಿಗಳ ಅಂದಾಜು ಮೊತ್ತದಲ್ಲಿ Type-A ಮಾದರಿ (Design) ಯಲ್ಲಿ ನಿರ್ಮಿಸಲು ಕರ್ನಾಟಕ ಗೃಹ ಮಂಡಳಿವತಿಯಿಂದ ಸವಿವರ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಸಲ್ಲಿಸಿ ಆಡಳಿತಾತ್ಮಕ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ಅನುಮೋದನೆ ನೀಡಿ ಆದೇಶಿಸಲಾಗಿದೆ.

ಉಳಿದ 3 ತಾಲ್ಲೂಕುಗಳಲ್ಲಿ ತಾಲ್ಲೂಕು ಪ್ರಜಾಸೌಧ ಕಟ್ಟಡ ನಿರ್ಮಿಸಲು ಜಮೀನು ಗುರುತಿಸಿ, ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದ್ದು, ಜಿಲ್ಲಾಧಿಕಾರಿಯವರಿಂದ ಪ್ರಸ್ತಾವನೆ ಸ್ವೀಕೃತಗೊಂಡ ನಂತರ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುವುದು.

**ಸಂಖ್ಯೆ: ಕಂಇ 13 ಎಲ್ಆರ್‌ಡಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು